**KARNATAKA STATE BAR COUNCIL**
**KARNATAKA STATAE BAR COUNCIL LAW ACADEMY**
**Old K.G.I.D. Building, Dr. Ambedkar Veedhi, Bangalore**
**PH: 22868712; 22868561**

---

13-11-2016

**-: ಪ್ರಕಟಣೆ :-**

ಕರ್ನಾಟಕ ರಾಜ್ಯ ಸರ್ಕಾರದ ನೆರವಿನೊಂದಿಗೆ ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಕಾನೂನು ಅಕಾಡೆಮಿಯಿಂದ ಯುವ ವಕೀಲರುಗಳಿಗೆ ತರಬೇತಿ ಕಾರ್ಯಕ್ರಮವನ್ನು ರಾಜ್ಯದ ಉಚ್ಚ ನ್ಯಾಯಾಲಯದ ಮೂರು ಪೀಠಗಳಲ್ಲಿ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ವಕೀಲರ ಸಂಘ, ಕಾನೂನು ಕಾಲೇಜು ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಸಹಕಾರದೊಂದಿಗೆ ನಡೆಸಲು ತೀರ್ಮಾನಿಸಲಾಗಿದೆ. ಈ ದಿಶೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಪ್ರಸ್ತುತ ಹಣಕಾಸಿನ ಸಾಲಿನಲ್ಲಿ ರೂ. 60 ಲಕ್ಷರೂಪಾಯಿಗಳನ್ನು ಮಂಜೂರು ಮಾಡಿರುತ್ತದೆ.

ಬೆಂಗಳೂರು ಉಚ್ಚನ್ಯಾಯಾಲಯದಲ್ಲಿ ವೃತ್ತಿ ಮಾಡುತ್ತಿರುವ ಯುವ ವಕೀಲರುಗಳು ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶವಿರುತ್ತದೆ. ಈ ಶಿಬಿರದಲ್ಲಿ 2015ರ ನಂತರ ವಕೀಲರಾಗಿ ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನಲ್ಲಿ ನೊಂದಾಯಿತರಾಗಿರುವ ಯುವ ವಕೀಲರಿಗೆ ರಾಜ್ಯ ವಕೀಲರ ಪರಿಷತ್ತು ಹಾಗೂ ಬೆಂಗಳೂರು ವಕೀಲರ ಸಂಘಗಳ ಸಂಯುಕ್ತಾಶ್ರಯದಲ್ಲಿ ವೃತ್ತಿ ತರಬೇತಿಯ ಶಿಬಿರವನ್ನು ಏರ್ಪಡಿಸಲು ನಿರ್ಧರಿಸಲಾಗಿದೆ.

ಸರ್ಕಾರದಿಂದ ಸಹಾಯಧನ ಪಡೆಯುತ್ತಿರುವಂತಹ ಎಲ್ಲಾ ವರ್ಗದ ವಕೀಲರು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಕಡ್ಡಾಯವಾಗಿರುತ್ತದೆ.

ಉಳಿದ ವಕೀಲರುಗಳು ತಮ್ಮ ಇಷ್ಟಾನುಸಾರವಾಗಿ ಸ್ವಇಚ್ಛೆಯಿಂದ ಈ ರೀತಿಯ ತರಬೇತಿಯು ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.

ಆದುದರಿಂದ 2015 ರಲ್ಲಿ ನೊಂದಾಯಿಸಲ್ಪಟ್ಟಂತಹ ಕಿರಿಯ ವಕೀಲರುಗಳು ತಮ್ಮ ಹೆಸರುಗಳನ್ನು ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಲು ನೊಂದಾಯಿಸಿಕೊಳ್ಳಬೇಕಾಗಿರುತ್ತದೆ. ನೊಂದಾವಣೆಯನ್ನು 4/11/2016 ರೊಳಗೆ ನೊಂದಾಯಿಸಕೊಳ್ಳಬೇಕಾಗಿರುತ್ತದೆ. ಈ ಪ್ರಕಟಣೆಯೊಂದಿಗೆ ನೊಂದಣಿ ಅರ್ಜಿಯನ್ನು ಲಗತ್ತಿಸಲಾಗಿದೆ. ಅರ್ಜಿಯ ನಮೂನೆಯನ್ನು ರಾಜ್ಯ ವಕೀಲರ ಪರಿಷತ್ತಿನ ವೆಬ್‌ಸೈಟ್ **www.ksbc.org.in** ನಿಂದ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಲಾ ಅಕಾಡೆಮಿಯ ಇ-ಮೇಲ್ **lawacademyksbc@gmail.com** ಮೂಲಕವಾಗಲಿ ಅಥವಾ ಖುದ್ದಾಗಿ ವಕೀಲರ ಪರಿಷತ್ತಿನ ಕಛೇರಿಗೆ ಸಲ್ಲಿಸಬಹುದು.

ಮಾನ್ಯ ಕರ್ನಾಟಕದ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು, ವಿಶ್ರಾಂತ ನ್ಯಾಯಮೂರ್ತಿಗಳು, ಹಿರಿಯ ನ್ಯಾಯಾವಾದಿಗಳು ಹಾಗೂ ತಜ್ಞ ಪ್ರಾಧ್ಯಾಪಕರುಗಳು ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಸೂಕ್ತ ಮಾರ್ಗದರ್ಶನ ನೀಡಲಿದ್ದಾರೆ.

ಆದುದರಿಂದ ಎಲ್ಲಾ ಯುವ ವಕೀಲ ಮಿತ್ರರು ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅದರ ಲಾಭ ಪಡೆದು ತರಬೇತಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕೇಳಿಕೊಳ್ಳುತ್ತೇವೆ. ತರಬೇತಿಯ ಕುರಿತು ವಿವರಗಳನ್ನು ರಾಜ್ಯ ವಕೀಲರ ಪರಿಷತ್ತಿನಿಂದ, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳ ಮುಖಾಂತರ ಪಡೆಯಬಹುದು. ನಿಗದಿಪಡಿಸಿದ ತರಬೇತಿ ಶಿಬಿರದ ಸ್ಥಳ ಹಾಗೂ ವೇಳಾಪಟ್ಟಿಯನ್ನು ನಂತರದಲ್ಲಿ ನೊಂದಾಯಿಸಿಕೊಂಡ ಯುವ ವಕೀಲರಿಗೆ ನೇರವಾಗಿ ಮತ್ತು ನ್ಯಾಯವಾದಿ ಸಂಘದ ಮೂಲಕ ತಿಳಿಸಲಾಗುವುದು.

(ಬಸವರಾಜ್ ಹುಡೇದಗಡ್ಡಿ)
ಕಾರ್ಯದರ್ಶಿ
ಕರ್ನಾಟಕ ರಾಜ್ಯ ವಕೀಲರ ಪರಿಷತ್ತು
ಬೆಂಗಳೂರು